Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ


भाग–IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, अगस्ट 5, 1985 | श्रावण 14, 1907 (शक) | खण्ड–3 |
| No. 1 | New Delhi Monday, August 5, 1985 | Shravana 14, 1907 (Saka) | Vol. 3 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಆಗಸ್ಟ್ ೫, ೧೯೮೫ | ಶ್ರಾವಣ ೧೪, ೧೯೦೭ (ಶಕ) | ಸಂಪುಟ ೩ |


## MINISTRY OF LAW, AND JUSTICE
(Legislative Department)

New Delhi, May 22, 1985/ Jaistha 1907 (Sakha)

The translations in Kannada of the following namely—(1) The Fatal Accidents Act, 1855 (2) The Converts Marriage Dissolution Act, 1866 (3) The Indian Easement Act, 1882 (4) The Agriculturists' Loans Act, 1884 (5) The Indian Reserve Forces Act, 1888 (6) The Prevention of Seditious Meetings Act, 1911 (7) The Hindu Disposition of property Act, 1916 (8) The Mica Mines Labour Welfare Fund Act, 1946 (9) The Delivery of Books and Newspapers (Public Libraries) Act, 1954 (10) The Meternity Benefit Act, 1961 (11) The Motor Transports Workers Act, 1961 (12) The Public Provident Fund Act, 1968 and (13) The Authorised Translations (Central Laws) Act, 1973–are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central laws) Act, 1973 (50 of 1973).

ಕೆಳಕಂಡ ಕೇಂದ್ರ ಅಧಿನಿಯಮಂಗಳ ಎಂದರೆ, (೧) ಪ್ರಾಣಾಂತಿಕ ದುರ್ಘಟನಾ ಅಧಿನಿಯಮ, ೧೮೫೫ ; (೨) ಮತಾಂತರಿತರ ವಿವಾಹ ವಿಘಟನಾ ಅಧಿನಿಯಮ, ೧೮೬೬ ; (೩) ಭಾರತ ಅನುಭೋಗ ಅಧಿನಿಯಮ, ೧೮೮೨ ; (೪) ಬೇಸಾಯಗಾರ ಸಾಲ ಅಧಿನಿಯಮ ೧೮೮೪ ; (೫) ಭಾರತೀಯ ಮೀಸಲು ದಳ ಅಧಿನಿಯಮ, ೧೮೮೮ ; (೬) ರಾಜದ್ರೋಹಾತ್ಮಕ ಸಭಾ ಪ್ರತಿಬಂಧಕ ಅಧಿನಿಯಮ, ೧೯೧೧ ; (೭) ಹಿಂದೂ ಸ್ವತ್ತಿನ ವಿಲೆ ಅಧಿನಿಯಮ, ೧೯೧೬ ; (೮) ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ ಅಧಿನಿಯಮ, ೧೯೪೬ ; (೯) ಪುಸ್ತಕ ಮತ್ತು ವೃತ್ತಪತ್ರಿಕೆ (ಸಾರ್ವಜನಿಕ ಗ್ರಂಥಾಲಯಗಳಿಗೆ) ಒಪ್ಪಿಸುವ ಅಧಿನಿಯಮ, ೧೯೫೪ ; (೧೦) ಪ್ರಸೂತಿ ಸೌಕರ್ಯ ಅಧಿನಿಯಮ, ೧೯೬೧ ; (೧೧) ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, ೧೯೬೧; (೧೨) ಸಾರ್ವಜನಿಕ ಭವಿಷ್ಯ ನಿಧಿ ಅಧಿನಿಯಮ, ೧೯೬೮; ಮತ್ತು (೧೩) (ಕೇಂದ್ರ ಕಾನೂನು) ಅಧಿಕೃತ ಭಾಷಾಂತರ ಅಧಿನಿಯಮ, ೧೯೭೩.—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

10+13 = 23

**ಭಾರತೀಯ ಮೀಸಲು ದಳ ಅಧಿನಿಯಮ, 1888**

**(1888ರ ಸಂಖ್ಯೆ 4)**

[2ನೇ ಮಾರ್ಚ್, 1888.]

ಭಾರತೀಯ ಮೀಸಲು ದಳಗಳನ್ನು ವಿನಿಯಮ ಮಾಡುವ ಅಧಿನಿಯಮ.

ಭಾರತೀಯ ಮೀಸಲು ದಳಗಳ ಆಡಳಿತ, ಶಿಸ್ತು ಮತ್ತು ವಿನಿಯಮನಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ ಈ ಕೆಳಕಂಡಂತೆ ಅಧಿನಿಯಮಿತಗೊಳಿಸಲಾಗಿದೆ:–

**1. ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಭಾರತೀಯ ಮೀಸಲು ದಳ ಅಧಿನಿಯಮ, 1888 ಎಂದು ಕರೆಯತಕ್ಕದ್ದು; ಮತ್ತು

(2) ಇದು, ಕೇಂದ್ರ ಸರ್ಕಾರವು, ಈ ಸಂಬಂಧದಲ್ಲಿ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಮೀಸಲು ದಳಗಳನ್ನು ನಿಯತ ಮತ್ತು ಪೂರಕ ಮೀಸಲು ದಳಗಳಾಗಿ ವಿಭಜಿಸುವುದು.–** ಭಾರತೀಯ ಮೀಸಲು ದಳಗಳು ಕ್ರಮಬದ್ಧ ಮತ್ತು ಪೂರಕ ಮೀಸಲು ದಳಗಳನ್ನು ಒಳಗೊಂಡಿರತಕ್ಕದ್ದು.

**3. ಮೀಸಲು ದಳಗಳ ಸೇವಾ ಕ್ಷೇತ್ರಗಳು.–** ಭಾರತೀಯ ಮೀಸಲು ದಳಗಳಿಗೆ ಸೇರಿದ ವ್ಯಕ್ತಿಯು ಭಾರತದ ಪರಿಮಿತಿಗಳ ಆಚೆ ಹಾಗೂ ಆ ಪರಿಮಿತಿಗಳೊಳಗೆ ಸೇವೆ ಸಲ್ಲಿಸಲು ಬದ್ಧನಾಗಿರತಕ್ಕದ್ದು.

**4. ಮೀಸಲು ದಳಗಳ ವಿನಿಯಮನದ ಬಗ್ಗೆ ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ನೀಡುವ ಮೂಲಕ ಭಾರತೀಯ ಮೀಸಲು ದಳಗಳ ಆಡಳಿತ, ಶಿಸ್ತು ಮತ್ತು ವಿನಿಯಮನದ ಬಗ್ಗೆ ನಿಯಮಗಳನ್ನು ಮತ್ತು ಆದೇಶಗಳನ್ನು ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ಆದೇಶವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನವು ಅಥವಾ ಅದರ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಆದೇಶದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿಕೊಂಡರೆ ಅಥವಾ ಆ ನಿಯಮವನ್ನು ಅಥವಾ ಆದೇಶವನ್ನು ಮಾಡಕೂಡದೆಂದು ಎರಡು ಸದನಗಳು ಒಪ್ಪಿಕೊಂಡರೆ ಆ ತರುವಾಯ ಆ ನಿಯಮವು ಅಥವಾ ಆದೇಶವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು

ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಆದೇಶದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದ್ದು.

**5. ಸೇನಾ ನಿಧಿಗೆ ಮೀಸಲು ದಳಗಳ ಹೊಣೆ.–** ಭಾರತೀಯ ಮೀಸಲು ದಳಗಳಿಗೆ ಸೇರಿದ ವ್ಯಕ್ತಿಯು ಸಂದರ್ಭಾನುಸಾರ ಅವನು ಅಧಿಕಾರಿಯಾಗಿರಲಿ ಅಥವಾ ಸೈನಿಕನಾಗಿರಲಿ, ಪ್ರಕರಣ 4ರ ಮೇರೆಗೆ ಮಾಡಬಹುದಾದಂಥ ನಿಯಮಗಳಿಗೆ ಮತ್ತು ಆದೇಶಗಳಿಗೆ ಒಳಪಟ್ಟು, ಕ್ರಮಬದ್ಧ ಸೈನ್ಯಕ್ಕೆ ಸೇರಿದ ವ್ಯಕ್ತಿಯ ರೀತಿಯಲ್ಲಿಯೇ ಮತ್ತು ಅದೇ ಮಟ್ಟಿಗೆ ಸೇನಾ ವಿಧಿಗೆ ಒಳಪಡತಕ್ಕದ್ದು.

**6. ಮೀಸಲು ದಳಗಳಿಗೆ ಸೇರಿದ ವ್ಯಕ್ತಿಗಳ ಕೆಲವೊಂದು ಅಪರಾಧಗಳಿಗೆ ದಂಡನೆ.–** (1) ಭಾರತೀಯ ಮೀಸಲು ದಳಗಳಿಗೆ ಸೇರಿದ ವ್ಯಕ್ತಿಯು,–

(ಎ) ಈ ಅಧಿನಿಯಮದ ಮೇರೆಗಿನ ಯಾವುದೇ ನಿಯಮ ಅಥವಾ ಆದೇಶದ ಮೇರೆಗೆ ಅಥವಾ ಅದರ ಅನುಸರಣೆಯಲ್ಲಿ ಯಾವುದೇ ಸ್ಥಳದಲ್ಲಿ ಹಾಜರಿರಬೇಕೆಂದು ಅಗತ್ಯಪಡಿಸುವಾಗ ಯುಕ್ತ ಕಾರಣವಿಲ್ಲದೆ, ಅಂಥ ಅಗತ್ಯತೆಗೆ ಅನುಸಾರವಾಗಿ ಹಾಜರಾಗಲು ತಪ್ಪಿದರೆ; ಅಥವಾ

(ಬಿ) ಯುಕ್ತ ಕಾರಣವಿಲ್ಲದೆ ಅಂಥ ಯಾವುದೇ ನಿಯಮ ಅಥವಾ ಆದೇಶವನ್ನು ಪಾಲಿಸಲು ತಪ್ಪಿದರೆ; ಅಥವಾ

(ಸಿ) ಅಂಥ ಯಾವುದೇ ನಿಯಮ ಅಥವಾ ಆದೇಶಕ್ಕೆ ವಿರುದ್ಧವಾಗಿ ಯವುದೇ ವೇತನ ಅಥವಾ ಇತರ ಮೊತ್ತವನ್ನು ವಂಚನೆಯಿಂದ ಪಡೆದರೆ, ಅವನು,–

(i) ಸೇನಾ ನ್ಯಾಯಾಲಯದಿಂದ ದೋಷಿ ಎಂದು ನಿರ್ಣೀತರಾದರೆ, ಮರಣ ದಂಡನೆಯ, ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಯವರೆಗಿನ ಗಡೀಪಾರು ಅಥವಾ ಕಾರಾವಾಸಿಯೂ, ಸೇನಾ ಅಧಿನಿಯಮ, 1950 (1950ರ 46)ರ ಮೂಲಕ ಆ ನ್ಯಾಯಾಲಯಕ್ಕೆ ನೀಡುವ ಅಧಿಕಾರವಿರುವಂಥ ದಂಡನೆಗೆ; ಅಥವಾ

(ii) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಅಥವಾ ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟ್‌ನಿಂದ ದೋಷಿ ಎಂದು ನಿರ್ಣೀತನಾದರೆ, ಮೊದಲ ಅಪರಾಧದ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ಆರು ತಿಂಗಳವರೆಗಿನ ಅವಧಿಯ ಮತ್ತು ಆ ತರುವಾಯದ ಯಾವುದೇ ಅಪರಾಧದ ಸಂಬಂಧದಲ್ಲಿ ಒಂದು ವರ್ಷದವರೆಗಿನ ಅವಧಿಯ ಕಾರಾವಾಸ ದಂಡನೆಗೆ ಗುರಿಯಾಗತಕ್ಕದ್ದು.

(2) ಭಾರತೀಯ ಮೀಸಲು ದಳಗಳಿಗೆ ಸೇರಿದ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಯಾವುದೇ ನಿಯಮ ಅಥವಾ ಆದೇಶದ ಮೂಲಕ ಅಥವಾ ಅದಕ್ಕೆ ಅನುಸಾರವಾಗಿ ಯಾವುದೇ ಸ್ಥಳದಲ್ಲಿ ಹಾಜರಿರಬೇಕೆಂದು ಅಗತ್ಯಪಡಿಸಲಾದಲ್ಲಿ, ಈ ಸಂಬಂಧದಲ್ಲಿ ಅಂಥ ನಿಯಮ ಅಥವಾ ಆದೇಶದ ಮೂಲಕ ನಿಯುಕ್ತಿ ಮಾಡಲಾದ ಅಧಿಕಾರಿಯಿಂದ ಸಹಿ ಮಾಡಲಾಗಿರುವುದೆಂದು ತಾತ್ಪರ್ಯವಾಗುವ ಮತ್ತು ಹಾಗೆ ಹಾಜರಾಗಬೇಕೆಂದು ಅಗತ್ಯಪಡಿಸಲಾಗಿದ್ದ ವ್ಯಕ್ತಿಯ ಅಂಥ ಅಗತ್ಯತೆಗೆ ಅನುಸಾರವಾಗಿ ಹಾಗೆ ಮಾಡಲು ತಪ್ಪಿದನೆಂದು ನಿರೂಪಿಸುವ ಒಂದು ಪ್ರಮಾಣಪತ್ರವು, ಅಂಥ ಅಧಿಕಾರಿಯ ಸಹಿ ಅಥವಾ ನಿಯುಕ್ತಿಯ ರುಜುವಾತಿಲ್ಲದೆಯೇ, ಅದರಲ್ಲಿ ನಿರೂಪಿಸಿದ ವಿಷಯಗಳಿಗೆ ಸಾಕ್ಷ್ಯವಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಅಪರಾಧಕ್ಕಾಗಿ ದೋಷಾರೋಪಿತವಾಗಿರುವ ಯಾರೇ ವ್ಯಕ್ತಿಯನ್ನು ಸೇನಾ ಅಥವಾ ಸಿವಿಲ್ ಅಭಿರಕ್ಷೆಗೆ ಅಥವಾ ಭಾಗಶಃ ಒಂದು ಪ್ರಕಾರದ ಅಭಿರಕ್ಷೆಗೆ ಮತ್ತು ಭಾಗಶಃ ಇನ್ನೊಂದು ಪ್ರಕಾರದ ಅಭಿರಕ್ಷೆಗೆ ತೆಗೆದುಕೊಳ್ಳಬಹುದು ಮತ್ತು ಅಭಿರಕ್ಷೆಯಲ್ಲಿ ಇಡಬಹುದು ಅಥವಾ ಒಂದು ಪ್ರಕಾರದ ಅಭಿರಕ್ಷೆಯಿಂದ ಇನ್ನೊಂದು ಪ್ರಕಾರದ ಅಭಿರಕ್ಷೆಗೆ ವರ್ಗಾಯಿಸಬಹುದು.

**7. ಮೀಸಲು ದಳಗಳಿಗೆ ಸೇರಿದ ವ್ಯಕ್ತಿಗಳ ತರಬೇತಿ, ಮಸ್ಟರು ಅಥವಾ ಸೇನಾ ಸೇವೆಯು ಮುಕ್ತಾಯವಾದ ಅನಂತರ ಅವರನ್ನು ಸಿವಿಲ್ ಸೇವೆಗೆ ಪುನಃ ನೇಮಿಸುವುದು.–** (1) ಭಾರತೀಯ ಮೀಸಲು ದಳಗಳಿಗೆ ಸೇರಿದ ಒಬ್ಬ ವ್ಯಕ್ತಿಯು, ಒಬ್ಬ ನಿಯೋಜನಕನಲ್ಲಿ ಅವನು ಕೆಲಸ ಮಾಡುತ್ತಿರುವ ಅವಧಿಯಲ್ಲಿ, ಈ ಅಧಿನಿಯಮದ ಮೇರೆಗಿನ ಯಾವುದೇ ನಿಯಮ ಅಥವಾ ಆದೇಶದ ಮೇರೆಗಿನ ಅವನ ಹೊಣೆಗಾರಿಕೆಗೆ ಅನುಸಾರವಾಗಿ, ತರಬೇತಿ, ಮಸ್ಟರು ಅಥವಾ ಸೇನಾ ಸೇವೆಗೆ ಕರೆಯಲ್ಪಟ್ಟರೆ, ಅಂಥ ನಿಯೋಜಕನಲ್ಲಿ, ಕೆಲಸ ಮಾಡುತ್ತಿದ್ದ ಆ ವ್ಯಕ್ತಿಯ ತರಬೇತಿ, ಮಸ್ಟರು ಅಥವಾ ಸೇನಾ ಸೇವಾ ಅವಧಿಯು ಮುಕ್ತಾಯಗೊಂಡ ಅನಂತರ, ಅವನ ಕೆಲಸಕ್ಕೆ ಹಾಗೆ ವಿಘ್ನಬಾರದೆ ಇದ್ದಿದ್ದರೆ ಅನ್ವಯವಾಗಬಹುದಾಗಿದ್ದ ಷರತ್ತುಗಳಿಗೆ ಕಡಿಮೆ ಅನುಕೂಲಕರವಾಗಿಲ್ಲದ ಕಸುಬಿನಲ್ಲಿ ಮತ್ತು ಅಂಥ ಷರತ್ತುಗಳ ಮೇರೆಗೆ ಪುನಃ ನೇಮಿಸಿಕೊಳ್ಳುವುದು, ಅಂಥ ಪ್ರತಿಯೊಬ್ಬ ನಿಯೋಜಕನ ಕರ್ತವ್ಯವಾಗಿರತಕ್ಕದ್ದು:

ಪರಂತು, ನಿಯೋಜಕನು ಅಂಥ ವ್ಯಕ್ತಿಯನ್ನು ಪುನಃ ನೇಮಕ ಮಾಡಲು ನಿರಾಕರಿಸಿದರೆ ಅಥವಾ ಅಂಥ ವ್ಯಕ್ತಿಯನ್ನು ಪುನಃ ನೇಮಕ ಮಾಡುವ ತನ್ನ ಹೊಣೆಯನ್ನು ಇಂಕಾರ ಮಾಡಿದರೆ ಅಥವಾ ಅಂಥ ವ್ಯಕ್ತಿಯನ್ನು ಪುನರ್ ನೇಮಕ ಮಾಡುವುದು ಯಾವುದೇ ಕಾರಣಕ್ಕಾಗಿ ಕಾರ್ಯಸಾಧ್ಯವಿಲ್ಲವೆಂದು ನಿಯೋಜಕನು ಪ್ರಾತಿನಿಧ್ಯಗೊಳಿಸಿದರೆ, ಉಭಯ ಪಕ್ಷಕಾರರಲ್ಲಿ ಯಾರೇ ಆಗಲಿ ಈ ವಿಷಯವನ್ನು ಈ ಅಧಿನಿಯಮಗಳ ಮೂಲಕ ಈ ಬಗ್ಗೆ ಗೊತ್ತುಪಡಿಸಲಾದ ಪ್ರಾಧಿಕಾರಕ್ಕೆ ಒಪ್ಪಿಸಬಹುದು ಮತ್ತು ಆ ಪ್ರಾಧಿಕಾರವು, ಅದರ ಮುಂದೆ ಮಂಡಿಸಬಹುದಾದಂಥ ಎಲ್ಲ ವಿಷಯಗಳನ್ನು ಪರಿಶೀಲಿಸಿದ ತರುವಾಯ

ಮತ್ತು ಆ ವಿಷಯದ ಬಗ್ಗೆ ಸದರಿ ನಿಯಮಗಳಲ್ಲಿ ಗೊತ್ತುಪಡಿಸಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ,–

(ಎ) ಈ ಪ್ರಕರಣದ ಉಪಬಂಧಗಳಿಂದ ನಿಯೋಜಕನನ್ನು ವಿನಾಯಿತಿಗೊಳಿಸಿ; ಅಥವಾ

(ಬಿ) ಅಂಥ ವ್ಯಕ್ತಿಯನ್ನು ಪ್ರಾಧಿಕಾರವು ಸೂಕ್ತವೆಂದು ಭಾವಿಸುವಂಥ ನಿಬಂಧನೆಗಳ ಮೇಲೆ ಪುನರ್ ನಿಯೋಜಿಸಲು ನಿಯೋಜಕನನ್ನು ಅಗತ್ಯಪಡಿಸಿ; ಅಥವಾ

(ಸಿ) ಹಾಗೆ ಪುನರ್ ನಿಯೋಜಿಸಲು ತಪ್ಪಿದರೆ ಅಥವಾ ಪುನರ್ ನಿಯೋಜಿಸಲು ಅಸಮರ್ಥನಾದರೆ, ನಿಯೋಜಕನಿಂದ ಅವನಿಗೆ ಕೊನೆಯದಾಗಿ ಸಂದಾಯವಾದ ಪ್ರತಿಫಲದ ದರದ ಪ್ರಕಾರ ಆರು ತಿಂಗಳ ಪ್ರತಿಫಲದ ಮೊತ್ತಕ್ಕೆ ಸಮನಾದ ಮೊತ್ತವನ್ನು ಪರಿಹಾರದ ರೂಪದಲ್ಲಿ ಅಂಥ ವ್ಯಕ್ತಿಗೆ ಸಂದಾಯ ಮಾಡಲು ನಿಯೋಜಕನನ್ನು ಅಗತ್ಯಪಡಿಸಿ, ಆದೇಶವನ್ನು ಹೊರಡಿಸತಕ್ಕದ್ದು.

(2) ಉಪಪ್ರಕರಣ (1)ರ ಪರಂತುಕದಲ್ಲಿ ಉಲ್ಲೇಖಿಸಲಾದಂಥ ಯಾವುದೇ ಪ್ರಾಧಿಕಾರದ ಆದೇಶವನ್ನು ಪಾಲಿಸಲು ನಿಯೋಜಕನು ತಪ್ಪಿದರೆ, ಅವನು ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ನಿಯೋಜಕನನ್ನು ದೋಷಿಯೆಂದು ನಿರ್ಣೀತಗೊಳಿಸಿದ ನ್ಯಾಯಾಲಯವು, ಅವನು ಪುನರ್ ನಿಯೋಜಿಸಲು ತಪ್ಪಿದಂಥ ವ್ಯಕ್ತಿಗೆ ನಿಯೋಜಕನು ಕೊನೆಯದಾಗಿ ಅವನಿಗೆ ಪ್ರತಿಫಲವನ್ನು ಸಂದಾಯ ಮಾಡಬೇಕಾಗಿದ್ದ ದರದ ಪ್ರಕಾರ ಆರು ತಿಂಗಳ ಪ್ರತಿಫಲಕ್ಕೆ ಸಮನಾದ ಮೊತ್ತವನ್ನು ಸಂದಾಯ ಮಾಡಲು (ಸದರಿ ಪ್ರಾಧಿಕಾರವು, ಈಗಾಗಲೇ ಅವನನ್ನು ಅಗತ್ಯಪಡಿಸಿರದಿದ್ದರೆ) ಆ ನಿಯೋಜಕನಿಗೆ ಆದೇಶಿಸತಕ್ಕದ್ದು ಮತ್ತು ಸದರಿ ಪ್ರಾಧಿಕಾರವಾಗಲೀ ಅಥವಾ ನ್ಯಾಯಾಲಯವಾಗಲೀ ಸಂದಾಯ ಮಾಡಲು ಅಗತ್ಯಪಡಿಸಿದ ಯಾವುದೇ ಮೊಬಲಗನ್ನು ಅಂಥ ನ್ಯಾಯಾಲಯವು ಜುಲ್ಮಾನೆಯನ್ನು ವಿಧಿಸಿದ್ದರೆ, ಹೇಗೋ ಹಾಗೆ, ವಸೂಲು ಮಾಡತಕ್ಕದ್ದು.

(3) ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಮೊದಲು ಕೆಲಸಕ್ಕೆ ಸೇರಿಸಿಕೊಳ್ಳಲಾಗಿದ್ದ ವ್ಯಕ್ತಿಯು ತನ್ನ ತರಬೇತಿ, ಮಸ್ಟರು ಅಥವಾ ಸೇನಾ ಸೇವೆಯ ಅವಧಿಯು ಮುಕ್ತಾಯವಾದ ಎರಡು ತಿಂಗಳೊಳಗಾಗಿ ಪುನಃ ನೇಮಕ ಮಾಡುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಲಿಲ್ಲ ಎಂದು ನಿಯೋಜಕನು ರುಜುವಾತುಪಡಿಸುವಲ್ಲಿ ಅದು ಆತನಿಗೆ ಪ್ರತಿ ರಕ್ಷಣೆಯಾಗಿರತಕ್ಕದ್ದು.

(4) ಉಪಪ್ರಕರಣದ (1)ರಲ್ಲಿ ವಿವರಿಸಲಾದಂಥ ವ್ಯಕ್ತಿಯು ಅವನು ತನ್ನ ನಿಯೋಜನೆಯಲ್ಲಿ ಪುನಃ ನೇಮಕ ಮಾಡಲು ನಿಯೋಜಕನಿಗೆ ಆ ಪ್ರಕರಣದ ಮೂಲಕ ವಿಧಿಸಲಾದ ಕರ್ತವ್ಯದಿಂದ ತಪ್ಪಿಸಿಕೊಳ್ಳುವ ವ್ಯಕ್ತಿಯನ್ನು ವಾಸ್ತವವಾಗಿ ತರಬೇತಿ, ಮಸ್ಟರು ಅಥವಾ ಸೇನಾ ಸೇವೆಗೆ ಕರೆಯುವುದಕ್ಕೆ ಮುಂಚಿತವಾಗಿಯೇ, ಆ ಉಪಪ್ರಕರಣದ ಮೂಲಕ ವಿಧಿಸಲಾದ ಕರ್ತವ್ಯದಿಂದ ತಪ್ಪಿಸಿಕೊಳ್ಳುವ

ಅಪಾಯವನ್ನು ಸೂಚಿಸುವಂಥ ಸಂದರ್ಭಗಳಲ್ಲಿ ಕೆಲಸದಿಂದ ತೆಗೆದುಹಾಕಿದವರ ನಿಯೋಜಕನಿಗೆ ಅನ್ವಯಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ತರಬೇತಿ, ಮಸ್ಟರು ಅಥವಾ ಸೇನಾ ಸೇವೆಗೆ ಕರೆಯುವ ಆದೇಶವನ್ನು ಹೊರಡಿಸಿದ ತರುವಾಯ ಅವನನ್ನು ಕೆಲಸದಿಂದ ತೆಗೆದು ಹಾಕಿದರೆ, ವಿರುದ್ಧವಾದುದು ರುಜುವಾತಾಗುವವರೆಗೆ ಅಂಥ ಆಶಯವಿದ್ದಿತೆಂದು ಭಾವಿಸತಕ್ಕದ್ದು.

**8. ತರಬೇತಿ, ಮಸ್ಟರು ಅಥವಾ ಸೇನಾ ಸೇವೆಗೆ ಕರೆ ಬಂದಾಗ, ಮೀಸಲು ದಳಗಳಿಗೆ ಸೇರಿದ ವ್ಯಕ್ತಿಗಳ ಕೆಲವು ಹಕ್ಕುಗಳನ್ನು ಸಂರಕ್ಷಿಸತಕ್ಕದ್ದು.**– ಭಾರತೀಯ ಮೀಸಲು ದಳಗಳಿಗೆ ಸೇರಿದ ಮತ್ತು ಅಧಿನಿಯಮದ ಮೇರೆಗಿನ ಯಾವುದೇ ನಿಯಮ ಅಥವಾ ಆದೇಶದ ಮೇರೆಗಿನ ತನ್ನ ಹೊಣೆಗಾರಿಕೆಗೆ ಅನುಸಾರವಾಗಿ ತರಬೇತಿ, ಮಸ್ಟರು ಅಥವಾ ಸೇನಾ ಸೇವೆಗೆ ಕರೆಯಲ್ಪಟ್ಟ ಯಾರೇ ವ್ಯಕ್ತಿಗೆ, ಯಾವುದೇ ಭವಿಷ್ಯ ನಿಧಿ ಅಥವಾ ವಯೋನಿವೃತ್ತಿ ನಿಧಿಯ ಅಥವಾ ತಾನು ಪರಿತ್ಯಜಿಸುವ ನಿಯೋಜನೆಯು ಸಂಬಂಧವಾಗಿ ನೌಕರರ ಪ್ರಯೋಜನಕ್ಕಾಗಿ ನಿರ್ವಹಿಸಲಾಗುವಂಥ ಇತರ ಯೋಜನೆಯ ಮೇರೆಗೆ ಯಾವುದೇ ಹಕ್ಕುಗಳು ಇದ್ದರೆ, ಅವನು ತರಬೇತಿ, ಮಸ್ಟರು ಅಥವಾ ಸೇನಾ ಸೇವೆಯಲ್ಲಿ ತೊಡಗಿರುವವರೆಗೆ ಮತ್ತು ಅವನನ್ನು ಪುನಃ ನೇಮಕ ಮಾಡಿದರೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಹಾಗೆ ಪುನರ್ ನೇಮಕವಾಗುವವರೆಗೆ, ಅಂಥ ನಿಧಿ ಅಥವಾ ಯೋಜನೆಯ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಮಾಡಲಾದ ನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂಥ ಹಕ್ಕುಗಳನ್ನು ಹೊಂದಿರುವುದು ಮುಂದುವರಿಯತಕ್ಕದ್ದು.